


ಮಾತಾಡೋಕ್ ಬಿಟ್ಟಿದ್ರಲ, ಆಗ ಕೇಳ್ದೇ ಉಳ್ದಿರೋ ಒಂದ್ ಪ್ರಶ್ನೆ ಇದೆ ಈಗ ಕೇಳ್ಲಾ?'

ಸಮರ್ಥ್‌ನಿಗೆ ಇದು ತುಂಟತನ ಅನ್ನಿಸಿದರೂ ಸ್ವಲ್ಪ ಕಸಿವಿಸಿಯಾಯಿತು. ಅದನ್ನು ತೋರಿಸಿಕೊಳ್ಳದೇ, 'ಹೀಗೇ ಹೇಳಿ ನಮ್ ಎಂಗೇಜ್ಮೆಂಟ್ ಆದಾಗಿಂದ ಒಂದಿಪ್ಪತ್ತ್ ಪ್ರಶ್ನೆ ಆದ್ರೂ ಕೇಳಿದಿಯಾ ಅಲ್ವಾ? ಇನ್ನೂ ಎಷ್ಟಿದಾವೆ ಇವತ್ ಅಷ್ಟೂ ಕೇಳಿ ಕ್ಲಿಯರ್ ಮಾಡ್ಕೊಂಬಿಡು. ಮತ್ತೆ ತಾಳಿ ಕಟ್ಟೋ ಸಮಯದಲ್ಲಿ ಅಳೋಕ್ ಶುರು ಮಾಡಿದ್ರೆ ನಾನೇನ್ ಮಾಡೋದು?' ಎಂದು ತನ್ನ ಗಡುಸಾದ ಮಾತನ್ನೂ ಸರಸದ ಹೊದಿಕೆಯಲ್ಲಿಟ್ಟು ಹೇಳಿದ.

'ನಿನ್ ಮೊಬೈಲ್‌ನಲ್ಲಿ **Wax** ಅಂತ ಒಂದ್ ನಂಬರ್ ಸೇವ್ ಆಗಿದೆ. ಅದಕ್ಕೆ ಪ್ರೊಫೈಲ್ ಪಿಕ್ ಇಲ್ಲ, ಅದ್ರಿಂದ ವಾಟ್ಸಾಪ್‌ಗೆ ಬಂದ ಯಾವ ಮೆಸೇಜ್‌ಗಳೂ ಚಾಟ್‌ನಲ್ಲಿ ಇಲ್ಲ. ಬಹುಶಃ ಡಿಲೀಟ್ ಆಗಿರಬಹುದು. ಅಂದ್ರೆ, ಡಿಲೀಟ್ ಮಾಡಿರ್ಬೋದು ನೀನು. ಆದರೆ ಕಾಲ್ ಲಾಗ್‌ನಲ್ಲಿ ಅದರಿಂದ ತುಂಬಾ ಸರಿ ನಿನಗೆ ಕಾಲ್ ಬಂದಿರುವ ಹಿಸ್ಟರಿ ಇದೆ. ಯಾರದು **Wax** ಅಂದರೆ?' ಎಂಬ ಪ್ರಶ್ನೆ ಕೇಳುವಾಗ ಸಹನಾ ಸ್ವಲ್ಪ ಗಂಭೀರವಾದಂತೆ ಕಂಡಳು. ಇದೇನು ಸಮರ್ಥ್‌ಗೆ ಎದುರಿಸಲಾಗದ ಪ್ರಶ್ನೆಯಾಗಿರಲಿಲ್ಲ. ಪದೇ ಪದೇ ಕ್ರೆಡಿಟ್ ಕಾರ್ಡ್ ಬೇಕಾ ಎಂದು ಒಂದೇ ನಂಬರಿನಿಂದ ವಾರಕ್ಕೊಮ್ಮೆಯಾದರೂ ಕಾಲ್ ಬರುತ್ತಿದ್ದರಿಂದ ಆ ನಂಬರನ್ನು ಕಾಂಟ್ಯಾಕ್ಟ್ಸ್‌ನಲ್ಲಿ ಕೊನೆಯಲ್ಲಿ ಇರಲಿ ಎಂಬ ಕಾರಣಕ್ಕೆ ಆತ **'Wax'** ಎಂದು ಸೇವ್ ಮಾಡಿಕೊಂಡಿದ್ದನಷ್ಟೆ. ಅದನ್ನು ಅಷ್ಟೇ ಸಹಜವಾಗಿ ಸಹನಾಗೆ ಹೇಳಿದ. ಆಕೆ ಅದನ್ನು ನಂಬಿದಳು. ಅಥವಾ ನಂಬಿದಂತೆ ನಟಿಸಿ ನಕ್ಕಳು. 'ಸಾರಿ ಸಮರ್ಥ್, ಅದು ಸಂಶಯದಿಂದ ಕೇಳಿದ್ದಲ್ಲ. ನಮ್ಮ ನಡುವೆ ಯಾವ ಸಂಶಯವೂ ಉಳಿಬಾರ್ದು ಅಂತ ಕೇಳಿದ್ದು' ಎಂದು ಅವನ ಕೈಯನ್ನು ಹಿಡಿದು ಭರವಸೆಯಿಂದ ಒಮ್ಮೆ ಒತ್ತಿದಳು. ಸಮರ್ಥ್ ಕೂಡ ಮೃದುವಾಗಿ ನಕ್ಕ. ಆದರೆ ಆತ ಕೇಳಿದ ಮುಂದಿನ ಪ್ರಶ್ನೆ ಮಾತ್ರ ಅವರಿಬ್ಬರ ಸಂಭಾಷಣೆ ಮತ್ತು ಸಂಬಂಧ ಎರಡನ್ನೂ ದಿಕ್ಕುಗೆಡಿಸಿತು. 'ಮದುವೆಗಳು ಮುರಿದು ಬೀಳೋಕೆ ನಿಜವಾದ ಕಾರಣ ಏನ್ ಗೊತ್ತಾ ಸಹನಾ? ಮದುವೆನೇ. ಮದುವೆ ಆಗಿರ್ಲಿಲ್ಲಾ ಅಂದ್ರೆ ಆ ಮದುವೆಗಳ್ಯಾವೂ ಮುರಿದು ಬೀಳ್ತಿರ್ಲಿಲ್ಲ ಅಲ್ವಾ?' ಎಂಬುದನ್ನು ಕೇಳಿ, 'ಆಕೆ ಇಂಥ ವಾಕ್ಯಗಳನ್ನ ಇಂಗ್ಲಿಷಲ್ಲಿ ಅದೇನೋ ಪ್ಯಾರಡಾಕ್ಸ್ ಅಂತಾನೋ ಆಂಟಿಥೀಸಿಸ್ ಅಂತಾನೋ ಏನೋ ಅಂತಾರೆ ನೋಡು. ಆದ್ರೆ ಈ ಸಮಯದಲ್ಲಿ ಈ ಮಾತಿನ ಅವಶ್ಯಕತೆ ಏನಿತ್ತು?' ಎಂದಳು.

***

'ಈಗ್ಲೆ ಅದರ ಬಗ್ಗೆ ಅವ್ನು ಹೇಳಿದ್ದು ಒಳ್ಳೆದಾಯಿತು. ಇಲ್ಲ ಅಂದರೆ ನನ್ ಥರ ನೀನ್ ಮುಂದೊಂದ್ ದಿನ ಸಾಯ್ತಿದ್ದೆ' ಎಂಬ ವಾಕ್ಯ ಅವರಿಬ್ಬರ ಹಿಂದಿನಿಂದ ಕೇಳಿ ಬಂತು. ಭಯಗೊಂಡು ಇಬ್ಬರೂ ಆ ಕಡೆ ತಿರುಗಿದಾಗ ಅಲ್ಲಿದ್ದ ಹೆಂಗಸಿನ ಆಕೃತಿಯೊಂದು, 'ಹೆಣ್ಣು ಅನುಮಾನಪಟ್ಟ ಮೇಲೂ ಅನ್ಯೋನ್ಯವಾಗಿರಬಲ್ಲಳು. ಆದರೆ ಗಂಡಸಿನ ತಲೆಗೆ ಹೊಕ್ಕ ಅನುಮಾನ ದೊಡ್ಡ ಗಂಡಾಂತರ ತಂದಿಡುತ್ತೆ. ಅಂಥದ್ದೊಂದು ಅನುಮಾನಕ್ಕೆ ಬಲಿಯಾದವಳು ನಾನು. ಮದುವೆಯಾಗಿ ಹದಿನೈದು ವರ್ಷವಾದ ನಂತರ ಈ ಹಾಳಾದ್ ಮೊಬೈಲ್ ಕಾರಣಕ್ಕೆ ಹುಟ್ಟಿದ ಅನುಮಾನ ನನ್ನ ಸಾವಿಗೆ ಕಾರಣವಾಯ್ತು' ಎಂದು ಹೇಳಿದ ಆಕೃತಿ ಮತ್ತದೇ ಜಾಗದಲ್ಲಿ ಮಲಗಿತು. ಸಹನಾ ಮತ್ತು ಸಮರ್ಥ್ ಭಯದಿಂದ ಹೆದರಿರುವಾಗಲೇ ಸ್ಮಶಾನದ ಮತ್ತೊಂದು ಜಾಗದಲ್ಲಿ ಒಬ್ಬ ಗಂಡಸಿನ ಆಕೃತಿ ಎದ್ದು ಕೂತು, 'ಹಾಗೆಲ್ಲ ಏನಿಲ್ಲ ಕಣ್ರೆ, ನನ್ ಹೆಂಡ್ತಿಯ ಅನುಮಾನದಿಂದಲೇ ನಾನಿಲ್ಲಿ ಬಂದ್